ಪ್ರಮಾಣೀಕರಿಸಲಾದ ದಿನಾಂಕಃ **09.07.2025.**

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್ ವಿ ಎಸ್ ವಕೀಲರಿಂದಃ

ವಾದಪತ್ರದಲ್ಲಿರುವ ಶೆಡ್ಯೂಲ್ ರಸ್ತೆ ಮತ್ತು Counter Claim ನಲ್ಲಿ ತೋರಿಸಿರುವ ಶೆಡ್ಯೂಲ್ ಒಂದೇ ಅಲ್ಲ. ನಾನು ಹೇಳಿರುವ ಶೆಡ್ಯೂಲ್ ರಸ್ತೆ ಸರ್ವೆ ನಂ 56/11, 56/1, 53/1 ಗಳಲ್ಲಿ ಹಾದುಹೋಗುತ್ತದೆ. ಈ ಸರ್ವೆ ನಂಬರ್ ಗಳ ವಿವರಗಳನ್ನು ನನ್ನ ಶೆಡ್ಯೂಲ್ ರಸ್ತೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಸಾಕ್ಷಿಗೆ ಒಂದು ರಸ್ತೆಯ ಫೋಟೋ ತೋರಿಸಿದ್ದು, ಈ ರಸ್ತೆಯು ತನ್ನ ಸ್ವಂತ ರಸ್ತೆ ಎಂದು ಒಪ್ಪಿದ್ದು ಅದನ್ನು ನಿ. ಪಿ. 45 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ರಸ್ತೆಯ ಫೋಟೋ ತೋರಿಸಿದ್ದು, ಅದರಲ್ಲಿರುವ ಕೆರೆಯನ್ನು ನೋಡಿ ಗುರುತಿಸಿದ್ದು ಅದನ್ನು ಒಪ್ಪಿದ್ದು ಅದನ್ನು ನಿ. ಪಿ. 46 ಎಂದು ಗುರುತಿಸಲಾಯಿತು. ನಿ. ಪಿ. 46 ಫೋಟೋದಲ್ಲಿ ರಸ್ತೆ ಇರುವ ಕುರುಹುಗಳು ಇದೆ, ಆದರೆ ಅದು ನಮ್ಮ ಸ್ವಂತಗಾಡಿಗಳು ಹೋಗಿರುವುದಾಗಿರುತ್ತದೆ ಮತ್ತು ಅಲ್ಲಿ ಯಾವುದೇ ರಸ್ತೆ ಇಲ್ಲ. ನ್ಯಾಯಾಲಯದ ಆದೇಶದಂತೆ ನಿ. ಪಿ. 46 ರಲ್ಲಿ ಹಾಕಿರುವ ಹುಲ್ಲಿನ ಮೆದೆಯ ಜಾಗವನ್ನು ಪೊಲೀಸರು ತೆರವುಗೊಳಿಸಿದರು ಎಂದರೆ ಸರಿಯಲ್ಲ.

ಸಾಕ್ಷಿಗೆ ನಿ. ಪಿ 43 ಮತ್ತು 44 ಫೋಟೋಗಳನ್ನು ತೋರಿಸಿ ಇದೇ ರಸ್ತೆಯನ್ನು ತೆರವುಗೊಳಿಸಿರುತ್ತಾರೆ ಎಂದರೆ ಸಾಕ್ಷಿಯು ನಿ. ಪಿ. 46 ರಲ್ಲಿರುವ ಮತ್ತು ಈ ಫೋಟೋಗಳಲ್ಲಿರುವ ಜಾಗ ಬೇರೆ ಎಂದು ಹೇಳುತ್ತಾರೆ. ನಿ. ಪಿ 44 ರಲ್ಲಿ ಕೆರೆ ಇದ್ದು, ನನ್ನ ಜಮೀನಿನಲ್ಲಿರುತ್ತದೆ. ನಿ. ಪಿ. 44 ಮತ್ತು 46 ರಲ್ಲಿ ಕಾಣುತ್ತಿರುವ ಕೆರೆ ಒಂದೇ ಆದರೆ ಜಾಗ ಬೇರೆ. ನಿ. ಪಿ. 44 ರಲ್ಲಿ ರಸ್ತೆಗೆ ಯಾವುದೇ ಅಡ್ಡ ಇಲ್ಲ ಎಂದರೆ ಸರಿ. ನಿ. ಪಿ. 46 ರಲ್ಲಿ ವಾಹನ ಚಲಾವಣೆಗೆ ಅಡಚಣೆ ಇದೆ, ಮಳೆ ಹೆಚ್ಚಾಗಿದ್ದಕ್ಕೆ ಹುಲ್ಲಿನ ಮೆದೆಯನ್ನು ನಾನೇ ಹಾಕಿರುತ್ತೇನೆ, ಆ ಇನ್ನೊಂದು ಫೋಟೋವನ್ನು ನೋಡಿ ಒಪ್ಪಿದ್ದು ಅದನ್ನು ನಿ. ಪಿ. 47 ಎಂದು ಗುರುತಿಸಲಾಯಿತು. ನನಗೆ ಜೀಪು, ಟಿಲ್ಲರ್ ಮತ್ತು ದ್ವಿಚಕ್ರ ವಾಹನ, ಕಾರು ಇದೆ. ಇನ್ನೊಂದು ಫೋಟೋದಲ್ಲಿ ಟಿಲ್ಲರ್ ಅನ್ನು ತೋರಿಸಿ ಅದನ್ನು ನೋಡಿ ಒಪ್ಪಿದ್ದು

ಅದನ್ನು ನಿ. ಪಿ. 48 ಎಂದು ಗುರುತಿಸಲಾಯಿತು. ನಿ.ಪಿ . 48 ರಲ್ಲಿರುವ ರಸ್ತೆ ನನ್ನ ಸ್ವಂತ ಜಮೀನಿನಲ್ಲಿದ್ದು, ಟಿಲ್ಲರ್ ನಿಲ್ಲಿಸಿರುವ ಜಾಗ ರಸ್ತೆಯ ಕೊನೆದಾಗಿರುತ್ತದೆ. ಸಾಕ್ಷಿಗೆ ಆ ಇನ್ನೊಂದು ಫೋಟೋವನ್ನು ತೋರಿಸಿದ್ದು ಅದರಲ್ಲಿ ಕೆರೆ ಅವರೇ ನಿರ್ಮಾಣ ಮಾಡಿರುತ್ತಾರೆ ಎಂದು ಒಪ್ಪಿದ್ದು ಅದನ್ನು ನಿ. ಪಿ. 49 ಎಂದು ಗುರುತಿಸಲಾಯಿತು. 4-5 ವರ್ಷಗಳ ಹಿಂದೆ ನಿ. ಪಿ. 49 ರಲ್ಲಿ ಕಾಣುವ ಕೆರೆ ನಿರ್ಮಾಣ ಮಾಡಿರುತ್ತೇನೆ. ಈದಾವೆ ಹಾಕಿದಾಗ ನನ್ನ ಜಮೀನಿನಲ್ಲಿ ಒಂದೇ ಕೆರೆ ಇತ್ತು ಎಂದರೆ ಸರಿ.

ನಿ. ಪಿ. 46 ಮತ್ತು 47 ರಲ್ಲಿ ಕಾಣುತ್ತಿರುವ ರಸ್ತೆಯು 8 ಅಗಲ ಇರುತ್ತದೆ, ಮುಂದುವರೆದು ನಿ. ಪಿ. 46 ರಲ್ಲಿ ಕಾಣುತ್ತಿರುವ ರಸ್ತೆ ಕೆರೆಯ ಏರಿ ಜಾಗವಾಗಿದ್ದು, ನಿ. ಪಿ. 47 ರಲ್ಲಿ ರಸ್ತೆ ಇದ್ದು ಆ ಎರಡು ಜಾಗ ಬೇರೆ ಬೇರೆ. ನಿ. ಪಿ. 46 ರಲ್ಲಿ ಕಾಣುವ ಜಾಗದಿಂದ ಮುಂದಕ್ಕೆ ಹೋದರೆ ಬೇರೆ ಜಮೀನು ಸರ್ವೆ ನಂ 42/2 ಇದೆ. ನನ್ನ ಈ ಹೇಳಿದ ಜಮೀನಿಗೆ ಗಾಡಿಯಲ್ಲಿ ಹೋಗುತ್ತೇನೆ. ಸರ್ವೆ ನಂ 42/2 ರ ಚೆಕ್ಕು ಬಂದಿ ಪೂರ್ವಕ್ಕೆ ಸರ್ವೆ ನಂ 43/2, ಪಶ್ಚಿಮಕ್ಕೆ ಸರ್ವೆ ನಂ 41/1(ಈಗವಿಂಗಡಣೆ ಆಗಿದೆ), ಉತ್ತರಕ್ಕೆ ಸರ್ವೆ ನಂ 42/1, ದಕ್ಷಿಣಕ್ಕೆ ಸರ್ವೆ ನಂ. 53/8. ನಿ.ಡಿ. 15 ಗ್ರಾಮನಕ್ಷೆಯಲ್ಲಿ ಸರ್ವೆ ನಂ 42/2 ಅನ್ನು ಸಾಕ್ಷಿ ಗುರುತಿಸಿದ್ದು ಸರ್ವೆ ನಂ 43/2 ನನ್ನ ಜಮೀನಾಗಿರುತ್ತದೆ. ಸರ್ವೆ ನಂ 43/1 ಬೇರೆಯವರಿಗೆ ಮಾರಾಟ ಮಾಡಿದ್ದಾರೆ. ಸರ್ವೆ ನಂ 41/1 ಮನೆಯಪಂಡ ಕುಟುಂಬದವರಿಗೆ ಸೇರಿರಬಹುದು. ಸರ್ವೆ ನಂ 42/1 ನಮ್ಮ ಕುಟುಂಬದವರಿಗೆ ಸೇರಿದ್ದು ಈಗ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದು ವಿಭಾಗವಾಗಿರುತ್ತದೆ. ಸರ್ವೆ ನಂ 42/1 ರಲ್ಲಿ ವಾದಿಗೆ ಜಮೀನು ಇದೆ. ಸರ್ವೆ ನಂ 42/2 ವಾದಿಯ ಸರ್ವೆ ನಂ 42/1 ಜಮೀನಿಗೆ ಹೊಂದಿಕೊಂಡತೆ ಇರುತ್ತದೆ ಎಂದರೆ ಸರಿಯಲ್ಲ, ಮೊದಲು ಇತ್ತು. ಸರ್ವೆ ನಂ 42/1 ವಾದಿಯ ಜಮೀನು bifurcate ಆಗಿದ್ದು ವಾದಿಯ ಸ್ವಾದೀನದಲ್ಲಿದೆ. ನಿ. ಪಿ. 46 ರಲ್ಲಿ ಕಾಣುವ ರಸ್ತೆ ಸರ್ವೆ ನಂ 42/2.

ನಿ. ಪಿ. 49 ಫೋಟೋದಲ್ಲಿ ಹೊಸ ಕೆರೆ ನಿರ್ಮಾಣವಾದ ನಂತರ ಮೊದಲು ಇದ್ದಷ್ಟು ರಸ್ತೆ ಅಗಲ ಇಲ್ಲ, ಕಡಿಮೆ ಆಗಿರುತ್ತದೆ. ವಾದಿಗೆ ನಿ. ಪಿ. 49 ರಲ್ಲಿ ಓಡಾಡಬಾರದು ಎಂಬ ಉದ್ದೇಶದಿಂದ ದಾವೆ ಹಾಕಿದ ನಂತರ ಆ ರೀತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಈ ಸ್ಥಳದಲ್ಲಿ ವಾಹನಗಳು ಹೋಗಲು ಸಾಧ್ಯವಿಲ್ಲ ಎಂದರೆ, ಮೊದಲು ಹೋಗುತ್ತಿರಲಿಲ್ಲ, ಅದು ಕಾಲುದಾರಿ ಆಗಿತ್ತು. ಕಾಲುದಾರಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲಿನಿಂದಲೂ ಅಲ್ಲಿ ವಾಹನಗಳು ಚಲಿಸುತ್ತಿತ್ತು ಎಂದರೆ ಸರಿಯಲ್ಲ. ಪೊನ್ನಂಪೇಟೆಯಿಂದ ಬಾಳಾಜಿ ಗ್ರಾಮಕ್ಕೆ ಹೋಗುವ ಮುಖ್ಯ ರಸ್ತೆ ಇದೆ. ಈ ರಸ್ತೆಯ ಬಲಕ್ಕೆ ನಮ್ಮ ಮನೆ ಇದೆ ಎಂದರೆ ಸರಿ. ನನ್ನ ಮನೆಯಿಂದ ವಾದಿ ಮನೆಯ 1 ವರೆ ಕಿ. ಮೀ ದೂರ. ಗದ್ದೆಯ ರಸ್ತೆಗಳು ಬಾಳಾಜಿ ಮುಖ್ಯ ರಸ್ತೆಯ ಎಡಕ್ಕೆ ಇರುತ್ತದೆ ಎಂದರೆ ಸರಿ. ವಾದಿಯು ಈ ಗದ್ದೆಯ ರಸ್ತೆಗಳಿಗೆ ಹೋಗಲು ಬಾಳಾಜಿ ಮುಖ್ಯ ರಸ್ತೆಗೆ ಬಂದು ನನ್ನ ಮನೆಯ ಸ್ವಲ್ಪ ಮುಂಚೆಯೇ ಬಲಕ್ಕೆ ತಿರುಗಿ ಹೋಗಬೇಕು ಎಂದರೆ ಸರಿ. ಬಾಳಾಜಿ ಮುಖ್ಯ ರಸ್ತೆಯಿಂದ ಗದ್ದೆಗೆ ಹೋಗಲು ಮೊದಲು ಸಿಮೆಂಟ್ ರಸ್ತೆ ಸಿಗುತ್ತದೆ. ನಾನು ಈ ಸಿಮೆಂಟ್ ರಸ್ತೆಯಲ್ಲಿ ನನ್ನ ಗದ್ದೆಯ ಜಾಗಗಳಿಗೆ ಹೋಗುವುದಿಲ್ಲ, ನನ್ನ ಜಮೀನುಗಳಿಗೆ ಹೋಗಲು ನನ್ನ ಜಮೀನಿನಲ್ಲಿ ನನ್ನ counter claim schedule ರಸ್ತೆ ಇರುತ್ತದೆ. ನನ್ನ counter claim schedule ರಸ್ತೆಗೆ ನಾನೇ ಕಲ್ಲು ಹಾಕಿ ರಸ್ತೆ ಮಾಡಿಕೊಂಡಿರುತ್ತೇನೆ, ಪಂಚಾಯಿತಿಯವರು ಹಾಕಿರುವುದಿಲ್ಲ. ವಾದಿಯ ವಾದಪತ್ರದ schedule ರಸ್ತೆ ಈ counter claim schedule ರಸ್ತೆ ಆಗಿರುತ್ತದೆ ಎಂದರೆ ಸರಿ.

ಬಾಳಾಜಿ ಮುಖ್ಯ ರಸ್ತೆಯಿಂದ ಗದ್ದೆಗೆ ಹೋಗುವ ಸದರಿ ರಸ್ತೆಯ ಅಕ್ಕಪಕ್ಕ ಕಾಫಿ ತೋಟಗಳು ಇದೆ ಎಂದರೆ ಸರಿ. ಬಲಕ್ಕೆ ಇರುವ ಕಾಫಿ ತೋಟ ನನ್ನದು. ಎಡಕ್ಕೆ ಇರುವ ಕಾಫಿ ತೋಟ ನನಗೆ ಮತ್ತು ಚಂಗಪ್ಪ ಮತ್ತು ಸುರೇಶ್ ರವರಿಗೆ ಸೇರುತ್ತದೆ. ಈ ಕಾಫಿ ತೋಟಗಳ ಸರ್ವೆ ನಂಬರ್‌ಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ನನಗೆ ಶೆಡ್ಯೂಲ್ ರಸ್ತೆಗಳು ಯಾವುದು ಎಂದು ಗೊತ್ತಾಗುತ್ತಿಲ್ಲ ಎಂದು ಹೇಳಿದ್ದು, ನ್ಯಾಯಾಲಯವು ಈಗ

counter claim ರಸ್ತೆ ಎಂದು ಕೇಳಿದಾಗ ಅದು ತನ್ನ ರಸ್ತೆ ಸ್ವಂತ ಜಮೀನಿನಲ್ಲಿರುವ ರಸ್ತೆ ಎಂದು ಹೇಳಿ ಈ ರಸ್ತೆಯ ಸರ್ವೆ ನಂ 53/2, 535, 53/8, 42/2 ಕ್ಕೆ ಕೊನೆಗೊಳ್ಳುತ್ತದೆ ಎಂದು ಹೇಳುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/xxx-**
ಸಿವಿಲ್ ನ್ಯಾಯಾಧೀಶರು,ಪೊನ್ನಂಪೇಟೆ.